# ಕರನಿರ್ಧಾರಣಾ ಕಾನೂನುಗಳ (ವಸೂಲಿ ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ) ಅಧಿನಿಯಮ, 1964

(1964ರ ಅಧಿನಿಯಮ ಸಂಖ್ಯೆ 11)

**[19.4.2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 120 ರಿಂದ 122 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು
2. ಪರಿಭಾಷೆಗಳು
3. ಕೆಲವು ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ
4. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ
5. ಅಧಿನಿಯಮವು ಪೂರ್ವಾನ್ವಯ ಪರಿಣಾಮ ಹೊಂದಿರುವುದು
6. ತೊಂದರೆಗಳನ್ನು ನಿವಾರಿಸುವ ಅಧಿಕಾರ
7. ನಿಯಮ ರಚನಾಧಿಕಾರ

ಅನುಸೂಚಿ

# ಕರನಿರ್ಧರಣಾ ಕಾನೂನುಗಳ (ವಸೂಲಿ ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ) ಅಧಿನಿಯಮ, 1964

**(1964ರ ಅಧಿನಿಯಮ ಸಂಖ್ಯೆ 11)**

[12ನೇ ಮೇ, 1964]

ಸರ್ಕಾರಕ್ಕೆ ಬರಬೇಕಾದ ಬಾಕಿಗಳ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಸಂಬಂಧದಲ್ಲಿ ವ್ಯವಹರಣೆಗಳನ್ನು ಮುಂದುವರಿಸುವುದಕ್ಕಾಗಿ ಮತ್ತು ಸಿಂಧುಗೊಳಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹದಿನೈದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು.**- ಈ ಅಧಿನಿಯಮವನ್ನು ಕರ ನಿರ್ಧರಣಾ ಕಾನೂನುಗಳ (ವಸೂಲಿ ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ) ಅಧಿನಿಯಮ, 1964 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ತೆರಿಗೆದಾರ" ಎಂದರೆ, -

(i) ಅಧಿಕ ಲಾಭಗಳ ತೆರಿಗೆ ಅಧಿನಿಯಮ, 1940 ಅಥವಾ ವ್ಯವಹಾರ ಲಾಭಗಳ ತೆರಿಗೆ ಅಧಿನಿಯಮ, 1947 ಇವುಗಳಿಗೆ ಸಂಬಂಧಿಸಿದಂತೆ, ಆ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯು ತೆರಿಗೆಯನ್ನು ಅಥವಾ ಯಾವುದೇ ಇತರ ಮೊತ್ತವನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿ;

(ii) ಆಸ್ತಿ ತೆರಿಗೆ ಅಧಿನಿಯಮ, 1953 - ಇದಕ್ಕೆ ಸಂಬಂಧಿಸಿದಂತೆ, ತೆರಿಗೆ ಸಂದಾಯ ಮಾಡಲು ಜವಾಬ್ದಾರನಾಗಿರುವ ಅಥವಾ ಆ ಅಧಿನಿಯಮದ ಮೇರೆಗೆ ಪರಿಭಾಷಿಸಲಾದಂತೆ ತೆರಿಗೆ ಸಂದಾಯ ಮಾಡಲು ಜವಾಬ್ದಾರನಾಗಿರುವ ವ್ಯಕ್ತಿ;

(iii) ಯಾವುದೇ ಇತರ ಅನುಸೂಚಿತ ಅಧಿನಿಯಮಕ್ಕೆ ಸಂಬಂಧಿಸಿದಂತೆ, ಅಧಿನಿಯಮದಲ್ಲಿ ಪರಿಭಾಷಿಸಲಾದಂಥ ವ್ಯಕ್ತಿ;

(ಬಿ) "ಸರ್ಕಾರಕ್ಕೆ ಬರಬೇಕಾದ ಬಾಕಿಗಳು" ಎಂದರೆ, ಯಾವುದೇ ಅನುಸೂಚಿತ ಅಧಿನಿಯಮದ ಸಂಬಂಧದಲ್ಲಿ, ಆ ಅಧಿನಿಯಮದ ಮೇರೆಗೆ ಯಾವೊಬ್ಬ ತೆರಿಗೆದಾರನಿಂದ ಸರ್ಕಾರಕ್ಕೆ ಸಂದಾಯವಾಗಬೇಕಾದ ಯಾವುದೇ ತೆರಿಗೆ, ಸುಂಕ, ದಂಡ, ಜುಲ್ಮಾನೆ, ಬಡ್ಡಿ, ವಾರ್ಷಿಕ ಠೇವಣಿ ಅಥವಾ ಯಾವುದೇ ಇತರ ಮೊತ್ತ;

(ಸಿ) "ಅನುಸೂಚಿತ ಅಧಿನಿಯಮ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮ;

(ಡಿ) "ತೆರಿಗೆ ವಿಧಿಸುವ ಪ್ರಾಧಿಕಾರ" ಎಂದರೆ, ಯಾವುದೇ ಅನುಸೂಚಿತ ಅಧಿನಿಯಮದ ಸಂಬಂಧದಲ್ಲಿ, ಆ ಅಧಿನಿಯಮದ ಮೇರೆಗೆ ಸರ್ಕಾರಕ್ಕೆ ಬರಬೇಕಾದ ಯಾವುದೇ

ಬಾಕಿಗಳ ಸಂಬಂಧದಲ್ಲಿ ತೆರಿಗೆದಾರನಿಗೆ ತಗಾದೆ ನೋಟೀಸನ್ನು ಜಾರಿ ಮಾಡುವುದಕ್ಕಾಗಿ ಅಧಿಕಾರ ಪಡೆದ ಅಧಿಕಾರಿ (ಅವನನ್ನು ಯಾವುದೇ ಹೆಸರಿನಿಂದ ಕರೆದಿರಲಿ);

(ಇ) "ತೆರಿಗೆ ವಸೂಲಿ ಅಧಿಕಾರಿ" ಎಂದರೆ, ಯಾವುದೇ ಅನುಸೂಚಿತ ಅಧಿನಿಯಮದ ಸಂಬಂಧದಲ್ಲಿ, ಆ ಅಧಿನಿಯಮದಲ್ಲಿ ತೆರಿಗೆ ವಸೂಲಿ ಅಧಿಕಾರಿಯೆಂದು ಪರಿಭಾಷಿಸಲಾದ ಮತ್ತು ಎಲ್ಲಿ ಅಂಥ ಪರಿಭಾಷೆಯಿಲ್ಲವೋ (ಅವನನ್ನು ಯಾವುದೇ ಹೆಸರಿನಿಂದ ಕರೆದಿರಲಿ) ಅಲ್ಲಿ ಸರ್ಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಿಗಾಗಿ ಆ ಅಧಿನಿಯಮದ ಮೇರೆಗೆ ಪ್ರಮಾಣ ಪತ್ರವನ್ನು ಯಾವ ಅಧಿಕಾರಿಗೆ ನೀಡಲಾಗಿದೆಯೋ ಅಂಥ ಅಧಿಕಾರಿ.

**3. ಕೆಲವು ವ್ಯವಹರಣೆಗಳ ಮುಂದುವರಿಕೆ ಮತ್ತು ಸಿಂಧುಗೊಳಿಸುವಿಕೆ.-** (1) ಸರ್ಕಾರಕ್ಕೆ ಬರಬೇಕಾದ ಯಾವುವೇ ಬಾಕಿಗಳ ಸಂಬಂಧದಲ್ಲಿ, ಯಾವುದೇ ಅನುಸೂಚಿತ ಅಧಿನಿಯಮದ ಮೇರೆಗೆ, ತೆರಿಗೆ ವಿಧಿಸುವ ಪ್ರಾಧಿಕಾರವು ತೆರಿಗೆದಾರನಿಗೆ ಯಾವುದೇ ತಗಾದೆ ನೋಟೀಸನ್ನು ಜಾರಿ ಮಾಡಿರುವಲ್ಲಿ, ಮತ್ತು ಸರ್ಕಾರಕ್ಕೆ ಬರಬೇಕಾದ ಅಂಥ ಬಾಕಿಗಳ ಸಂಬಂಧದಲ್ಲಿ ಯಾವುದೇ ಅಪೀಲು ಅಥವಾ ಇತರ ವ್ಯವಹರಣೆ ಸಲ್ಲಿಸಿರುವಲ್ಲಿ ಅಥವಾ ನಡೆದಿರುವಲ್ಲಿ ಆಗ,-

(ಎ) ಅಂಥ ಅಪೀಲು ಅಥವಾ ವ್ಯವಹರಣೆಯಲ್ಲಿ ಸರ್ಕಾರಕ್ಕೆ ಬರಬೇಕಾದಂಥ ಬಾಕಿಯ ಮೊತ್ತವನ್ನು ಹೆಚ್ಚಿಸಿರುವಲ್ಲಿ, ತೆರಿಗೆ ವಿಧಿಸುವ ಪ್ರಾಧಿಕಾರವು ಸರ್ಕಾರಕ್ಕೆ ಬರಬೇಕಾದ ಬಾಕಿಯಲ್ಲಿ ಹಾಗೆ ಹೆಚ್ಚಿಸಿರುವಂಥ ಮೊತ್ತದ ಸಂಬಂಧದಲ್ಲಿ ಮಾತ್ರ ಮತ್ತೊಂದು ನೋಟೀಸನ್ನು ತೆರಿಗೆದಾರನಿಗೆ ಜಾರಿ ಮಾಡತಕ್ಕದ್ದು ಮತ್ತು ಅಂಥ ಅಪೀಲು ಅಥವಾ ವ್ಯವಹರಣೆಯು ವಿಲೆಯಾಗುವ ಮೊದಲೇ ಅವನಿಗೆ ಜಾರಿಗೊಳಿಸಲಾದ ತಗಾದೆ ನೋಟೀಸು ಅಥವಾ ನೋಟೀಸುಗಳಿಗೆ ಒಳಪಡುವ, ಸರ್ಕಾರಕ್ಕೆ ಬರಬೇಕಾದ ಅಂಥ ಬಾಕಿ ಮೊತ್ತದ ಸಂಬಂಧದಲ್ಲಿನ ಯಾವುದೇ ವ್ಯವಹರಣೆಗಳನ್ನು ಯಾವುದೇ ಹೊಸ ತಗಾದೆ ನೋಟೀಸನ್ನು ಜಾರಿ ಮಾಡದೆ ಅಂಥ ವಿಲೆಯ ನಿಕಟ ಪೂರ್ವದಲ್ಲಿ ಅಂಥ ವ್ಯವಹರಣೆಗಳು ಇದ್ದ ಹಂತದಿಂದಲೇ ಅವುಗಳನ್ನು ಮುಂದುವರಿಸತಕ್ಕದ್ದು;

(ಬಿ) ಸರ್ಕಾರಕ್ಕೆ ಬರಬೇಕಾದ ಅಂಥ ಬಾಕಿಯನ್ನು ಅಂಥ ಅಪೀಲಿನಲ್ಲಿ ಅಥವಾ ವ್ಯವಹರಣೆಯಲ್ಲಿ ಕಡಿಮೆಗೊಳಿಸಿದಲ್ಲಿ,-

(i) ತೆರಿಗೆದಾರನಿಗೆ ತೆರಿಗೆ ವಿಧಿಸುವ ಪ್ರಾಧಿಕಾರವು ಹೊಸ ತಗಾದೆ ನೋಟೀಸು ಜಾರಿಗೊಳಿಸುವುದು ಅಗತ್ಯವಿರತಕ್ಕದ್ದಲ್ಲ;

(ii) ತೆರಿಗೆ ವಿಧಿಸುವ ಪ್ರಾಧಿಕಾರವು ಹಾಗೆ ಕಡಿಮೆಗೊಳಿಸಿರುವ ಸಂಗತಿಯನ್ನು ತೆರಿಗೆದಾರನಿಗೆ ತಿಳಿಸತಕ್ಕದ್ದು ಮತ್ತು ಅಂಥ ಮೊತ್ತದ ವಸೂಲಿಗಾಗಿ ತೆರಿಗೆ ವಸೂಲಿ ಅಧಿಕಾರಿಗೆ ಪ್ರಮಾಣ ಪತ್ರವನ್ನು ನೀಡಿರುವಲ್ಲಿ ಆ ಅಧಿಕಾರಿಗೂ ಸಹ ತಿಳಿಸತಕ್ಕದ್ದು;

(iii) ಅಂಥ ಅಪೀಲು ಅಥವಾ ವ್ಯವಹರಣೆಯ ವಿಲೆಗೆ ಮೊದಲು ತೆರಿಗೆದಾರನಿಗೆ ಜಾರಿ ಮಾಡಲಾಗಿದ್ದ ತಗಾದೆ ನೋಟೀಸು ಅಥವಾ ನೋಟೀಸುಗಳ ಆಧಾರದ ಮೇಲೆ ಪ್ರಾರಂಭಿಸಲಾಗಿದ್ದ ಯಾವುವೇ ವ್ಯವಹರಣೆಗಳನ್ನು, ಅಂಥ ವಿಲೆಯ ನಿಕಟಪೂರ್ವದಲ್ಲಿ ಅಂಥ ವ್ಯವಹರಣೆಗಳು ಇದ್ದ ಹಂತದಿಂದಲೇ ಹಾಗೆ ಕಡಿಮೆಗೊಳಿಸಲಾದ ಮೊತ್ತದ ಸಂಬಂಧದಲ್ಲಿ ಮುಂದುವರಿಸತಕ್ಕದ್ದು;

(ಸಿ) ಸರ್ಕಾರಕ್ಕೆ ಬರಬೇಕಾದ ಅಂಥ ಬಾಕಿಗಳ ಸಂಬಂಧದಲ್ಲಿ (ದಂಡ ವಿಧಿಸುವಿಕೆ ಅಥವಾ ಬಡ್ಡಿ ವಿಧಿಸುವಿಕೆಯೂ ಒಳಗೊಂಡಂತೆ) ಇರುವ ಯಾವುದೇ ವ್ಯವಹರಣೆಗಳನ್ನು, ಅಂಥ ಅಪೀಲು ಅಥವಾ ವ್ಯವಹರಣೆಯನ್ನು ವಿಲೆ ಮಾಡಿದ ತರುವಾಯ ತೆರಿಗೆದಾರನಿಗೆ ಹೊಸ ತಗಾದೆ ನೋಟೀಸು ಜಾರಿ ಮಾಡಿಲ್ಲವೆಂಬ ಅಥವಾ ಅಂಥ ಅಪೀಲು ಅಥವಾ ವ್ಯವಹರಣೆಯಲ್ಲಿ ಹಾಗೆ ಸರ್ಕಾರಕ್ಕೆ ಬರಬೇಕಾದ ಬಾಕಿ ಮೊತ್ತವನ್ನು ಹೆಚ್ಚಿಸಿದ ಅಥವಾ ಕಡಿಮೆಗೊಳಿಸಿದ ಕಾರಣ ಮಾತ್ರದಿಂದಲೇ ಅಮಾನ್ಯಗೊಳಿಸತಕ್ಕದ್ದಲ್ಲ:

ಪರಂತು, ಯಾವುದೇ ಅಂತಿಮ ಆದೇಶದ ಪರಿಣಾಮವಾಗಿ, ಸರ್ಕಾರಕ್ಕೆ ಬರಬೇಕಾದ ಅಂಥ ಬಾಕಿಗಳನ್ನು (ವಾರ್ಷಿಕ ಠೇವಣಿಯನ್ನು ಹೊರತುಪಡಿಸಿ) ಕಡಿಮೆಗೊಳಿಸಲಾಗಿದ್ದರೆ ಮತ್ತು ಅದನ್ನು ಸಂದಾಯ ಮಾಡುವುದಕ್ಕೆ ತಪ್ಪಿದ್ದಕ್ಕಾಗಿ ತೆರಿಗೆದಾರನ ಮೇಲೆ ವಿಧಿಸಲಾದ ದಂಡವು ಹಾಗೆ ಕಡಿಮೆಗೊಳಿಸಲಾದ ಮೊತ್ತಕ್ಕಿಂತ ಹೆಚ್ಚಿಗೆಯಾಗಿರುವಲ್ಲಿ ಆ ಹೆಚ್ಚುವರಿಯಾದ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ ಮತ್ತು ಒಂದು ವೇಳೆ ಈಗಾಗಲೇ ಅದನ್ನು ವಸೂಲು ಮಾಡಲಾಗಿದ್ದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದ ಅಂಥ ಸಮಯದೊಳಗಾಗಿ ಮತ್ತು ಅಂಥ ರೀತಿಯಲ್ಲಿ ತೆರಿಗೆದಾರನು ತೆರಿಗೆ ವಿಧಿಸುವ ಪ್ರಾಧಿಕಾರಕ್ಕೆ ಅರ್ಜಿ ಹಾಕಿಕೊಂಡ ಮೇಲೆ ಅವನಿಗೆ ಆ ಮೊಬಲಗನ್ನು ಮರು ಪಾವತಿ ಮಾಡತಕ್ಕದ್ದು:

ಮತ್ತೂ ಪರಂತು, ಅಂಥ ಆದೇಶದ ಪರಿಣಾಮವಾಗಿ ಯಾವುದೇ ವಾರ್ಷಿಕ ಠೇವಣಿ ಮಾಡುವಲ್ಲಿ ತೆರಿಗೆದಾರನು ತಪ್ಪಿದುದಕ್ಕಾಗಿ ಅವನ ಮೇಲೆ ವಿಧಿಸಿದ ದಂಡದ ಮೊತ್ತವು ಮಾಡಬೇಕಾದ ವಾರ್ಷಿಕ ಠೇವಣಿ ಮೊತ್ತಕ್ಕಿಂತ ಒಂದೂವರೆ ಪಟ್ಟು ಹೆಚ್ಚಾಗಿದ್ದಲ್ಲಿ, ಆ ಹೆಚ್ಚುವರಿ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ, ಮತ್ತು ಒಂದು ವೇಳೆ ಈಗಾಗಲೇ ಅದನ್ನು ವಸೂಲಿ ಮಾಡಲಾಗಿದ್ದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದಂಥ ಸಮಯದೊಳಗಾಗಿ ಮತ್ತು ಅಂಥ ರೀತಿಯಲ್ಲಿ ತೆರಿಗೆದಾರನು ತೆರಿಗೆ ವಿಧಿಸುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಹಾಕಿಕೊಂಡ ಮೇಲೆ ಆ ಮೊಬಲಗನ್ನು ತೆರಿಗೆದಾರನಿಗೆ ಮರುಪಾವತಿ ಮಾಡತಕ್ಕದ್ದು:

ಮತ್ತೂ ಪರಂತು, ಅಂಥ ಅಪೀಲು ಅಥವಾ ವ್ಯವಹರಣೆಯಲ್ಲಿ ಸರ್ಕಾರಕ್ಕೆ ಬರಬೇಕಾದ ಯಾವುದೇ ಬಾಕಿಯನ್ನು ಕಡಿಮೆಗೊಳಿಸಿರುವಲ್ಲಿ ಮತ್ತು ತೆರಿಗೆದಾರನು ಆ ಸಂಬಂಧದಲ್ಲಿ ಯಾವುದೇ ಮರುಪಾವತಿಗೆ ಹಕ್ಕುಳ್ಳವನಾಗಿರುವಲ್ಲಿ ಅಂಥ ಮರುಪಾವತಿಯನ್ನು ಆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು.

(2) ಯಾವುದೇ ಅನುಸೂಚಿತ ಅಧಿನಿಯಮದ ಮೇರೆಗೆ ಯಾವುದೇ ಅಪೀಲಿನಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಮಾಡಿದ ಯಾವುದೇ ಆದೇಶದ ಪರಿಣಾಮವಾಗಿ ಸರ್ಕಾರಕ್ಕೆ ಬರಬೇಕಾದ ಬಾಕಿ ಮೊತ್ತದಲ್ಲಿ ಯಾವುದೇ ವ್ಯತ್ಯಾಸವಾಗದೇ ಇರುವಂಥ ಯಾವುದೇ ಸಂದರ್ಭದಲ್ಲಿ, ಹೊಸದಾಗಿ ತಗಾದೆ ನೋಟೀಸು ನೀಡುವ ಅಗತ್ಯವಿರತಕ್ಕದ್ದಲ್ಲವೆಂದು ಸಂದೇಹಗಳ ನಿವಾರಣೆಗಾಗಿ, ಈ ಮೂಲಕ ಘೋಷಿಸಲಾಗಿದೆ.

(3) ಯಾವುದೇ ನ್ಯಾಯಾಲಯ, ನ್ಯಾಯ ಮಂಡಳಿ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ, ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು.

**4. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ಯಾವುದೇ ತೆರಿಗೆ ಅಥವಾ ಸುಂಕವನ್ನು ವಿಧಿಸುವುದಕ್ಕಾಗಿ ಅಥವಾ ವಸೂಲಿ ಮಾಡುವುದಕ್ಕಾಗಿ ಉಪಬಂಧಿಸಲು ಯಾವುದೇ ಕೇಂದ್ರ ಅಧಿನಿಯಮದ ಹೆಸರನ್ನು ಸೇರಿಸತಕ್ಕದ್ದು ಮತ್ತು ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಹಾಗೆ ಸೇರಿಸಲಾದ ಅಧಿನಿಯಮವನ್ನು 2ನೆಯ ಪ್ರಕರಣದ (ಸಿ) ಖಂಡದ ಅರ್ಥ ವ್ಯಾಪ್ತಿಯೊಳಗಡೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮವೆಂದು ಭಾವಿಸತಕ್ಕದ್ದು.

**5. ಅಧಿನಿಯಮವು ಪೂರ್ವಾನ್ವಯ ಪರಿಣಾಮ ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ಯಾವುದೇ ಅನುಸೂಚಿತ ಅಧಿನಿಯಮದ ಮೇರೆಗೆ, ಯಾವುದೇ ತೆರಿಗೆ ವಿಧಿಸುವ ಪ್ರಾಧಿಕಾರದಿಂದ ತೆರಿಗೆದಾರನಿಗೆ ಜಾರಿ ಮಾಡಲಾಗಿರುವ ಪ್ರತಿಯೊಂದು ತಗಾದೆ ನೋಟೀಸಿನ ಸಂಬಂಧದಲ್ಲಿ ಅಂಥ ನೋಟೀಸನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿತವಾಗಿ ಅಥವಾ ತರುವಾಯ ಜಾರಿ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಅನ್ವಯಿಸತಕ್ಕದ್ದು ಮತ್ತು ಯಾವಾಗಲೂ ಅನ್ವಯಿಸಲಾಗಿದೆಯೆಂಬುದಾಗಿ ಭಾವಿಸಲ್ಪಡತಕ್ಕದ್ದು.

**6. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯ ಅಥವಾ ಯುಕ್ತವೆಂದು ತೋರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

**7. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟೂ ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

## ಅನುಸೂಚಿ

**(2 (ಪಿ) ಪ್ರಕರಣವನ್ನು ನೋಡಿ)**

1. ಭಾರತೀಯ ಆದಾಯ ತೆರಿಗೆ ಅಧಿನಿಯಮ, 1922 (1922ರ 11).
2. ಅಧಿಕ ಲಾಭಗಳ ತೆರಿಗೆ ಅಧಿನಿಯಮ, 1940 (1940ರ 15).
3. ವ್ಯವಹಾರ ಲಾಭಗಳ ತೆರಿಗೆ ಅಧಿನಿಯಮ, 1947 (1947ರ 21).
4. ಆಸ್ತಿ ತೆರಿಗೆ ಅಧಿನಿಯಮ, 1953 (1953ರ 34).
5. ಸಂಪತ್ತು ತೆರಿಗೆ ಅಧಿನಿಯಮ, 1957 (1957ರ 27).
6. ವೆಚ್ಚದ ತೆರಿಗೆ ಅಧಿನಿಯಮ, 1957 (1957ರ 29).
7. ಬಹುಮಾನ ತೆರಿಗೆ ಅಧಿನಿಯಮ, 1958 (1958ರ 29).
8. ಆದಾಯ ತೆರಿಗೆ ಅಧಿನಿಯಮ, 1961 (1961ರ 43).
9. ಹೆಚ್ಚುವರಿ ಲಾಭಗಳ ತೆರಿಗೆ ಅಧಿನಿಯಮ, 1963 (1963ರ 14).

* * * * *